ದಿನದ ಪಟ್ಟಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೊಡಗು ಜಿಲ್ಲೆಯಲ್ಲಿರುವ ಮಹಿಳಾ ಮಂಡಳಿಗಳ ಬಗ್ಗೆ

900 (2060) ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆಯಲ್ಲಿರುವ ಮಹಿಳಾ ಮಂಡಳಿಗಳ ಸಂಖ್ಯೆಎಷ್ಟು (ನಗರ ಮತ್ತು ಗ್ರಾಮೀಣ ಪ್ರದೇಶವಾರು ವಿವರಣೆಯನ್ನು ಸಲ್ಲಿಸಿ)

ಆ) ಮಹಿಳಾ ಮಂಡಳಿಗಳನ್ನು ಪ್ರಾರಂಭಿಸಲು ಉತ್ತೇಜಿಸುವ ದೃಷ್ಟಿಯಿಂದ ಸರ್ಕಾರ ಯಾವುದಾದರೂ ಯೋಜನೆಯನ್ನು ನಿರೂಪಿಸಿದೆಯೇ?

ಇ) ಹಾಗಿದ್ದಲ್ಲಿ, ಅಂತಹ ಉದ್ದೇಶಿಸಿರುವ ಯೋಜನೆಗಳ ಹೆಸರುಗಳನ್ನು ತಿಳಿಸಿರಿ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) 267.

ಪ್ರದೇಶವಾರು ವಿವರಣೆ:—

ನಗರ ಪ್ರದೇಶದಲ್ಲಿ	265
ಗ್ರಾಮೀಣ	02
	267

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಹೆಗ್ಗಡದೇವನ ಕೋಟೆಯಲ್ಲಿರುವ ಗಿರಿಜನ ವಿವಿಧೋದ್ದೇಶ ಸಂಘ

903 (2638) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಸಹಕಾರ ಮಂತ್ರಿಗಳ್ಳ ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೆಗ್ಗಡದೇವನಕೋಟೆಯಲ್ಲಿ ಗಿರಿಜನ ವಿವಿಧೋದ್ದೇಶ ಸಹಕಾರ ಸಂಘ ಯಾವಾಗ ರಚನೆಯಾಯಿತು? ಈ ಸಂಘವು ಆಡಳಿತ ಮಂಡಲಿಯ ಸದಸ್ಯರುಗಳು ಯಾರು?

ಆ) ಸಂಘದಲ್ಲಿ ಗಿರಿಜನರಿಗೆ ಅನ್ಯಾಯ ಮತ್ತು ಮೋಸವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಪ್ರಥಮದಲ್ಲಿ ಈ ಸಹಕಾರ ಸಂಘವು ಹೆಗ್ಗಡದೇವನಕೋಟೆ ಅರಣ್ಯ ಕೂಲಿಗಾರರ ಸಹಕಾರ ಸಂಘವೆಂದು ನೋಂದಾಯಿಸಲ್ಪಟ್ಟಿದ್ದು, ಇತ್ತೀಚೆಗೆ ಹೆಗ್ಗಡದೇವನಕೋಟೆ ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘವೆಂದು ಉದ್ದೇಶ ಸಂಖ್ಯೆ ಡಿಆರ್‌ಎಂ/ಎಂವೈಎಸ್/ಎಂಡಿ/865/ಹೆಚ್‌ಡಿ ಕೋಟೆ/76-77, ದಿನಾಂಕ 3-1-1976ರಂದು ಪರಿವರ್ತಿಸಲ್ಪಟ್ಟಿದೆ.